O.S No.42/2019
PW. - 1

**ದಿನಾಂಕಃ 08-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ ಸಿ.ಕೆ.ಆರ್ ವಕೀಲರಿಂದ ಪ್ರತಿವಾದಿಗಳ ಪರವಾಗಿಃ-**

ಒರಗು ಮಲ್ಲಯ್ಯ ಎಂದರೆ ನಮ್ಮ ತಾತಾ ಇರುತ್ತಾರೆ. ಒರಗು ಮಲ್ಲಯ್ಯ ಇವರಿಗೆ ಏಳು ಜನ ಮಕ್ಕಳು ಇದ್ದರು. ನಮ್ಮ ತಂದೆ ಹೆಸರು ಹನುಮಂತ ಇರುತ್ತದೆ. ನಮ್ಮ ತಂದೆ ನಮ್ಮ ತಾತನಿಗೆ ದೊಡ್ಡ ಮಗ ಇರುತ್ತಾರೆ. ನಮ್ಮ ತಾತನ ಏಳು ಜನ ಮಕ್ಕಳು ಈಗ ತೀರಿಕೊಂಡಿರುತ್ತಾರೆ. ನಮ್ಮ ತಾತನ ಏಳು ಜನ ಮಕ್ಕಳಿಗೂ ಸಹ ಮಕ್ಕಳು ಇದ್ದು, ಅವರು ಎಲ್ಲರೂ ಮಿಟ್ಟಿಮಲ್ಕಾಪುರ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಮಿಟ್ಟಿ ಮಲ್ಕಾಪುರ ಗ್ರಾಮದಲ್ಲಿರುವ ಆಸ್ತಿಗಳು ನಮ್ಮ ತಾತನ ಏಳು ಮಕ್ಕಳಿಗೆ ಸಂಬಂಧಪಟ್ಟಿದ್ದು ಇರುತ್ತವೆ. ನಮ್ಮ ತಾತನ ಮೊಮ್ಮಕಳ ಹೆಸರುಗಳನ್ನು ಈ ದಾವೆಯಲ್ಲಿ ನಾವು ಕಾಣಿಸಿರುವುದಿಲ್ಲ ಎಂದರೆ ಸರಿ. ಮಿಟ್ಟಿ ಮಲ್ಕಾಪುರ ಗ್ರಾಮದಲ್ಲಿರುವ ಜಮೀನುಗಳು ಒಣ ಬೇಸಾಯದ ಜಮೀನುಗಳು ಎಂದರೆ ಸರಿ. ಮಿಟ್ಟಿ ಮಲ್ಕಾಪುರದಲ್ಲಿ ಒಟ್ಟು ಎರಡೂವರೆ ಎಕ್ಕರೆ ಜಮೀನು ಎಂದು ನಾನು ವಾದಪತ್ರದಲ್ಲಿ ಕಾಣಿಸಿದ್ದೇನೆ ಎಂದರೆ ಸರಿ. 1 ನೇ ಮತ್ತು 2 ನೇ ಪ್ರತಿವಾದಿಗಳು ಜೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿದಾರರು ತಮ್ಮ ವಕೀಲರ ಸಮಕ್ಷಮದಲ್ಲಿ ಸಾಕ್ಷಿ ನುಡಿಯುತ್ತೇನೆ ಎಂದು ಹೇಳಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**